ಕಂದಾಯ ಇಲಾಖೆ

**ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ**

ಸಂ.ಕಂ.ಪಹಣಿ/ವಿವಾದ/40/2015-16 ದಿನಾಂಕ:

ವಾದಿಗಳು

1. ಶ್ರೀ ರಗಟಿ ನೀಲಮ್ಮ ಲೇಟ್ ರಗಟಿ ಮಲ್ಲಿಕಾರ್ಜುನ ಹಗರನೂರು
2. (ವಕೀಲರು ಗುರುಬಸವರಾಜ ಹಡಗಲಿ)

ಪ್ರತಿವಾದಿಗಳು

1 ಶ್ರೀ ಬೋಮ್ಮಣ್ಣಿ ಸಂಗಪ್ಪ ತಂದೆ ರಾಚೋಟಪ್ಪ

2 (ಎ ರುದ್ರಪ್ಪ ವಕೀಲರು,ಹಡಗಲಿ)

ವಾದಗ್ರಸ್ತ ಜಮೀನಿನ ವಿವರ

| ಕ್ರಮ ಸಂಖ್ಯೆ | ಸರ್ವೇ ನಂಬರ | ವಿಸ್ತೀರ್ಣ | ಗ್ರಾಮದ ಹೆಸರು |
|---|---|---|---|
| 1 | 594 | 9.90 | ಮಾಗಳ |
| 2. | 595 | 6.27 | ಮಾಗಳ |
| | | | |

ಪೀಠಿಕೆ,

ಹಡಗಲಿ ತಾಲೂಕಿನ ಮಾಗಳ ಗ್ರಾಮದ ಸರ್ವೆ ನಂ 594 ಮತ್ತು 595 ವಿಸ್ತೀರ್ಣ 9.90 ಮತ್ತು6.27 ಎಕರೆ ಜಮೀನನ್ನು ಶ್ರೀಮತಿ ರಗಟಿ ನೀಲಮ್ಮ ಗಂಡ ಲೇಟ್ ಮಲ್ಲಿಕಾರ್ಜುನಪ್ಪ ಇವರು ದಿನಾಂಕ:15.10.2014 ರಂದು ವಂಶವೃಕ್ಷ ಮತ್ತು ಮರಣ ಪ್ರಮಾಣ ಪತ್ರದೊಂದಿಗೆ ಅರ್ಜಿ ಸಲ್ಲಿಸಿ ತಮ್ಮ ಹೆಸರಿಗೆ ಪೋತಿ ವಾರಸ ಪ್ರಕಾರ ಹಕ್ಕು ಬದಾಲವಣೆ ಮಾಡಲು ಕೋರಿರುತ್ತಾರೆ ಈ ಮೇರೆಗೆ ಹಕ್ಕು ಬದಾಲವಣೆ ಸಂಖ್ಯೆ ಹೆಚ್ 60/2014-15 ರಲ್ಲಿ ನೋದಾಯಿಸಿಕೊಂಡು ಹಿತಾಸಕ್ತರಿಗೆ ನಮೂನೆ 21 ರಲ್ಲಿ ನೋಟೀಸ್ ಜಾರಿ ಮಾಡಲು ಕ್ರಮ ಜರುಗಿಸಿದಾಗ ಪ್ರತಿವಾದಿ ನಿಗಧಿತ ಅವದಿಯಲ್ಲಿ ತಕರಾರು ಸಲ್ಲಿಸಿರುತ್ತಾರೆ ಕಾರಣ ಕಂದಾಯ ನೀರೀಕ್ಷಕರು ಹೂವಿನಹಡಗಲಿ ಇವರು ಪ್ರಕರಣವನ್ನು ವಿವಾದಸ್ಪದ ವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಪ್ರಕಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 129ರಡಯಲ್ಲಿ ವಿಚಾರಣೆಗೆ ತೆಗೆದುಕೊಂಡು ವಾದಿ ಪ್ರತಿವಾದಿಗಳಿಗೆ ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ: 12.01.2015 ರಂದು ಪ್ರಾರಂಬಿಸಿ 23.07.2016 ಕ್ಕೆ ಮುಕ್ತಾಯ ಗೋಳಿಸಲಾಯಿತು

ವಾದಿ ಮತ್ತು ಪ್ರತಿವಾದಿಗಳು ತಮ್ಮ ವಕೀಲರ ದ್ವಾರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ವಾದಿ ಪರ ವಕೀಲರು ಪೋತಿ ವಾರಸು ಪ್ರಕಾರ ಶ್ರೀಮತಿ ರಗಟಿ ನೀಲಮ್ಮ ಹೆಸರಿಗೆ ಪಟ್ಟಬಲಾವಣೆ ಮಾಡಲು ಕೊರಿರುತ್ತಾರೆ.

ಪ್ರತಿವಾದಿ ಪರ ವಕೀಲರು ಲಿಖಿತ ತಕಾರರು ಹೇಳಿಕೆಯನ್ನು ಸಲ್ಲಿಸಿ ದಿನಾಂಕ:23.09.1919ರ ದಾನ ಪತ್ರ ಸಂಖ್ಯೆ 1785/1919 ಪ್ರಕಾರ ಬೋಮ್ಮಣ್ಣಿ ಚನ್ನ ಬಸಪ್ಪನ ಮಗ ಗದಿಗೆಪ್ಪನು ಬೊಮ್ಮಣ್ಣಿ ಸಂಗಪ್ಪನ ಮಗ ಕುರುಗೋಡಪ್ಪನಿಗೆ ನೊಂದಾಯಿತ ದಾನ ಪತ್ರದ ಪ್ರಕಾರ ಹಕ್ಕು ಬಲಾವಣೆ ನೀಡಿದ್ದು ಪ್ರತಿವಾದಿಯು ಸದರಿ ಕುರೂಗೋಡಪ್ಪನ ಮೊಮ್ಮಗನಾಗಿರುವುದರಿಂದ ಮತ್ತು ಪಹಣಿ ದಾಖಾಲೆಗಳಲ್ಲಿ ಕಾಲಂ 10 ರಲ್ಲಿ ಮುಂಚಿನಿಂದಲೂ ಇಲ್ಲಿಯವರೆಗೆ ಪ್ರತಿವಾದಿ ಹೆಸರು ನಮೋದಾಗಿರುವುದರಿಂದ ಹಾಗೂ ಪ್ರಸ್ತಾಪಿತ ಜಮೀನುಗಳು ಪ್ರತಿವಾದಿಯ ಸ್ವಾದೀನಾಭವದಲ್ಲಿರುವುದರಿಂದ ವಾದಿಯ ಹೆಸರಿಗೆ ಪಟ್ಟಾ ಬದಾಲವಣೆ ಮಾಡಬಾರದೆಂದು ಕೊರಿರುತ್ತಾರೆ ಆದರೆ ವಾದಿಯ ಯಾದ ಶ್ರೀಮತಿ ರಗಟಿ ನೀಲಮ್ಮ ಇವರ ದಿವಂಗತ ಪತಿ ಶ್ರೀ ರಗಟಿ ಮಲ್ಲಿಕಾರ್ಜುನಪ್ಪ ಇವರು 1981-82ರಿಂದ ಪಹಣಿ ದಾಖಾಲೆಗಳಲ್ಲಿ ಕಾಲಂ 9ರಲ್ಲಿ ಅಭಿವಿಕ್ತಕುಟುಂಬದ ಮ್ಯಾನೆಜಿಂಗ್ ಮೆಂಬರ್ ಇಂದಿನ ವರೆಗೆ ನಮೋದಾಗಿದ್ದು ಸದರಿ ಜಮೀನುಗಳು ಅವಿಭಕ್ತ ಕುಟುಂಬದ ಆಸ್ತಿಯಂದು ಮೇಲ್ ನೋಟಕ್ಕೆ ಕಂಡುಬಂದಿರುತ್ತದೆ ಕಾರಣ ಈ ಕೆಳಕಂಡ

:-ಆದೇಶ-:

ಪ್ರಕರಣದ ವಾಸ್ತುವಾಂಶ, ಹಿನ್ನೆಲೆ ಹಾಗೂ ದಾಖಾಲೆಗಳ ಮೇರಿಗೆ ವಾದಿಗಳು ಮತ್ತು ಪ್ರತಿವಾದಿಗಳು ಮಾಗಳ ಗ್ರಾಮದ ಸರ್ವೆ ನಂ 594 ಮತ್ತು 595 ವಿಸ್ತೀರ್ಣ 9.90 ಮತ್ತು6.27 ಎಕರೆ ಜಮೀನುಗಳ ಬಗ್ಗೆ ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 07.2016 ರಂದು ತೆರದ ನ್ಯಾಯಲಯದ್ಲಿ ಗೋಶಿಸಲಾಗಿದೆ

ತಹಶೀಲ್ದಾರರು
ಹಡಗಲಿ

ಪ್ರತಿಯನ್ನು:

1. ಶ್ರೀ ರಗಟಿ ನೀಲಮ್ಮ ಲೇಟ್ ರಗಟಿ ಮಲ್ಲಿಕಾರ್ಜುನ ಹಗರನೂರು

1 ಶ್ರೀ ಬೋಮ್ಮಣ್ಣಿ ಸಂಗಪ್ಪ ತಂದೆ ರಾಚೋಟಪ್ಪ